ಅನುಭವ ಕಥನ

## ವಸ್ತುಗಳಿಗೆ ವಯಸ್ಸಾಗಬಹುದು, ಭಾವನೆಗಳಿಗಲ್ಲ...

# ಆತ್ಮಸಂಗಾತದ ಹಳೆಯ ವಸ್ತುಗಳು

**ಹಳೆಯ ವಸ್ತುಗಳು ತಲೆಮಾರುಗಳಿಂದಲೂ ನಮ್ಮೊಂದಿಗೆ ಸಾಗಿಬಂದಿರುತ್ತವೆ. ಮನೆಯಲ್ಲಿ ಸ್ಥಳದ ಅಭಾವವಿದ್ದರೂ, ಹಳೆಯ ವಸ್ತುಗಳಿಗೂ ಒಂದಿಷ್ಟು ಜಾಗ ಕೊಡುವಷ್ಟು ಔದಾರ್ಯ ನಮ್ಮಲ್ಲಿದ್ದೇ ಇದೆ.**

■ **ಜ್ಯೋತಿ ಡಿ. ಬೊಮ್ಮಾ**



ವಸ್ತುಗಳು ಹಳತಾದಂತೆ ಅವುಗಳ ಮೇಲಿನ ಮೋಹ ಹೆಚ್ಚಾಗುತ್ತಾ ಹೋಗುತ್ತದೆ. ಆದರೆ ಅಮೆರಿಕದಲ್ಲಿರುವ ಗೆಳೆಯರೊಬ್ಬರು ಹೇಳುತಿದ್ದರು, ಅಲ್ಲಿ ಕಾರು, ಟೀವಿ, ಫ್ರಿಜ್‌ನಂತಹ ವಸ್ತುಗಳು ಕೆಟ್ಟರೆ ರಿಪೇರಿ ಮಾಡಿಸಿ ಮರುಬಳಕೆ ಮಾಡುವುದಿಲ್ಲವಂತೆ. ಅವುಗಳನ್ನು ಗುಜರಿಗೆ ಹಾಕಿ ಹೊಸದನ್ನು ಕೊಂಡುಕೊಳ್ಳುತ್ತಾರಂತೆ. ಕೇಳಿ ಆಶ್ಚರ್ಯವಾಯಿತು. ನಮ್ಮಲ್ಲಿ ವಸ್ತುಗಳನ್ನು ಎಷ್ಟು ಸಾರಿ ರಿಪೇರಿ ಮಾಡಿಸುತ್ತೇವೆಯೋ ಲೆಕ್ಕವೇ ಇರುವುದಿಲ್ಲ. ರಿಪೇರಿ ಮಾಡುವವ ಇನ್ನು ಸರಿಪಡಿಸಲು ಸಾಧ್ಯವೇ ಇಲ್ಲ ಎಂದು ಕೈ ಎತ್ತಿದರೂ ಬಿಡದೆ ಕಾಡಿಬೇಡಿ ನಾವೇ ಅವನಿಗೆ ಸಲಹೆ ಕೊಟ್ಟು ಸರಿಪಡಿಸಲುಕೋರಿಕೊಳ್ಳುತ್ತೇವೆ. ಅವನಿಗಾದರೋ ಅದು ಉದ್ಯೋಗವೇ, ಕೆಟ್ಟದ್ದನ್ನು ಸರಿಪಡಿಸಿದಂತೆ ಮಾಡಿ ಕೆಲದಿನಗಳ ನಂತರ ಮತ್ತೆ ತನ್ನನ್ನೇ ಹುಡುಕಿ ಬರುವಂತೆ ಮಾಡುತ್ತಾನೆ. ಸಮಯಕ್ಕೆ ಅತಿ ಬೆಲೆ ಕೊಡುವ ಅಮೆರಿಕನ್ನರಿಗೆ ಹಾಳಾದ ವಸ್ತು ಸರಿಪಡಿಸಿ ತರಲು ಸಮಯವಿರಲಿಕ್ಕಿಲ್ಲ. ಯಾವುದೋ ಒಂದು ವಸ್ತು ನಿರ್ದಿಷ್ಟ ಸಮಯದ ನಂತರ ಕೆಟ್ಟು ರಿಪೇರಿಗೆ ಬಂದರೆ ಅದಕ್ಕೆ ಎಷ್ಟೇ ರಿಪೇರಿ ಮಾಡಿಸಿದರೂ ಮತ್ತೆ ಮತ್ತೆ ಹಾಳಾಗುವ ಸಂಭವವಿರುವುದೆಂದು ಅವರು ಮನಗಂಡಿದ್ದಾರೆ. ಅದಕ್ಕಾಗಿಯೇ ಆ ವಸ್ತುವಿನ ಹಿಂದೆ ಅಲೆದಾಡಿ ಸಮಯ ವ್ಯಯಿಸುವುದರ ಬದಲು ಹೊಸದನ್ನೇ ಕೊಳ್ಳುತ್ತಾರೆ.

ನಮ್ಮ ದೇಶದಲ್ಲಿ, ಬಡವರೆ ಇರಲಿ, ಉಳ್ಳವರೆ ಇರಲಿ, ಮನೆಯಲ್ಲಿ ರಿಪೇರಿ ಮಾಡಿಸಿ ಬಳಸದ ವಸ್ತುಗಳೇ ಇಲ್ಲ. ರಿಪೇರಿ ಮಾಡಿಸಿ ತಂದಷ್ಟು ಅದರ ಮೇಲಿನ ಮೋಹ ಹೆಚ್ಚಾಗುತ್ತಾ ಹೋಗುತ್ತದೆ. ಮಿತವಾಗಿ ಬಳಸುವುದು, ಮರುಬಳಕೆ ಮಾಡುವುದು, ಇವೆಲ್ಲವೂ ನಾವು ತಲೆಮಾರುಗಳಿಂದ ಕಲಿಯುತ್ತಾ ಬಂದ ಅಂಶಗಳು. ಉದಾಹರಣೆಗೆ, ಟೂತ್‌ಪೇಸ್ಟನ್ನು ಹಿಚುಕಿ ಹಿಚುಕಿ ಕುತ್ತಿಗೆವರೆಗೆ ಬಂದರೂ ಬಿಡದೆ ಅದನ್ನು ತಲೆಕೆಳಗೆ ಮಾಡಿ ಟೇಬಲ್‌ನ ಕೊನೆಗೆ ಉಜ್ಜಿ ಉಜ್ಜಿ ಅದರ ಬಾಯಿಂದ ಕೊನೆ ಬಿಂದುವನ್ನು ಉಗುಳಿಸಿ ಬ್ರಷ್‌ಗೆ ಹಚ್ಚುವುದು, ಸಾಬೂನಿನ ಕೊನೆಯ ತುಂಡನ್ನು ಬಿಡದೆ ಮೈಗೆ ಬಟ್ಟೆಗೆ ಉಜ್ಜುವುದು. ಹೊರಗಿನಿಂದ ತಂದ ಆಹಾರದ ಪೊಟ್ಟಣಕ್ಕೆ ಸುತ್ತಿಕೊಟ್ಟ ದಾರವನ್ನು ನಾಜೂಕಿನಿಂದ ಬಿಡಿಸಿ ಸುತ್ತಿ ಇಡುವುದು. ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳನ್ನೆಲ್ಲ ಮತ್ತೊಂದು ಕ್ಯಾರಿಬ್ಯಾಗ್‌ನಲ್ಲಿ ಶೇಖರಿಸಿ ಇಡುವುದು. ಜಾಮ್, ಐಸ್ ಕ್ರೀಂ, ಚಾಕೊಲೇಟ್ ಡಬ್ಬಿಗಳನ್ನೆಲ್ಲ ಮತ್ತಾವುದೋ ವಸ್ತುಗಳನ್ನು ಹಾಕಿಡಲು ಬಳಸುವದು. ಇಂಥವುಗಳನ್ನೆಲ್ಲ ನಮಗಾರೂ ಕಲಿಸದಿದ್ದರೂ ನಮ್ಮ ದೇಶದಲ್ಲಿ ಬಹುತೇಕ ಜನರು ಅನುಸರಿಸುವ ಹವ್ಯಾಸಗಳು. ಇದರಲ್ಲಿ ನಮಗಾವುದೇ ಕೀಳರಿಮೆ ಕಾಣಿಸಲು ಸಾಧ್ಯವೇ ಇಲ್ಲ. ಬಿಸಾಡುವ ವಸ್ತುಗಳಲ್ಲೂ ಹೊಸತೇನನ್ನೋ ಹುಡುಕುವ ಚಾಕಚಕ್ಯತೆ ನಮ್ಮಲ್ಲಿದೆ.

ತಲೆಮಾರುಗಳಿಂದ ಕಾಪಿಟ್ಟುಕೊಂಡು ಬಂದ ಕಟ್ಟಿಗೆ ತೊಟ್ಟಿಲು, ಹಿತ್ತಾಳೆ ಪಾತ್ರೆಗಳು, ಕಾಲುಗಳು ಅಲ್ಲಾಡುವ ಮಂಚ, ಒಂದು ಕಾಲು ಮುರಿದರೂ ಬಿಸಾಡದೆ ಮತ್ತೊಂದು ಕುರ್ಚಿ ಅದರ ಮೇಲಿಟ್ಟು ಬಳಸುವ ಪ್ಲಾಸ್ಟಿಕ್ ಕುರ್ಚಿ, ಇವೆಲ್ಲವೂ ನಮಗೆ ಗುಜರಿಗೆ ಹಾಕುವ ವಸ್ತುಗಳೆನಿಸದೆ ನಮ್ಮೊಂದಿಗೆ ಆದಿ ಅನಾದಿಕಾಲದಿಂದಲೂ ಬೆಸೆದಿರುತ್ತವೆ.

ನಮ್ಮ ಮನೆಯಲ್ಲಿ ಸುಮಾರು ವರ್ಷ ನಡೆಸದೆ ಒಂದೆಡೆ ನಿಂತ ಕಾರೊಂದಿದೆ. ಖರೀದಿಸುವವರಿರಲಿ, ಗುಜರಿಯವರು ಬೆಲೆ ಕೊಟ್ಟು ಖರೀದಿಸಲಾಗದಂತಾಗಿದೆ ಅದರ ಅವಸ್ಥೆ. ನಮ್ಮ ತಂದೆಗೆ ಅದರ ಮೇಲೆ ಎಷ್ಟು ಮೋಹವೆಂದರೆ ಮ್ಯೂಸಿಯಂನಲ್ಲಿ ಪುರಾತನ ವಸ್ತುಗಳನ್ನು ಜೋಪಾನವಾಗಿ ಇಟ್ಟಂತೆ ಇಟ್ಟಿದ್ದಾರೆ. ಬಹಳ ವರ್ಷಗಳ ಕಾಲ ನಮ್ಮನ್ನೆಲ್ಲ ಹೊತ್ತು ಓಡಾಡಿ ದಣಿದ ಕಾರು ಪದೇ ಪದೇ ಕೆಡತೊಡಗಿತು. ಆಯ್ತು, ನನ್ನ ಅವಸಾನ ಸಮೀಪಿಸಿದೆ ಎಂದು ಅದು ಎಚ್ಚರಿಸಿದರೂ ಬಿಡದೆ ಚಿಕಿತ್ಸೆ ಮಾಡಿಸಿ ಮಾಡಿಸಿ ಉಪಯೋಗಿಸಿದ್ದಕ್ಕೆ, 'ಇನ್ನು ಮುಂದೆ ಇದರ ಚಿಕಿತ್ಸೆ ಸಾಧ್ಯವೇ ಇಲ್ಲ' ಎಂದು ಮೆಕಾನಿಕ್ ಘೋಷಿಸಿಬಿಟ್ಟ. ಇಷ್ಟು ದಿನ ನಮ್ಮನ್ನೆಲ್ಲ ಹೊತ್ತು ದಣಿದ ವಾಹನ ಸುಮ್ಮನೆ ನಿಂತಿರಲಿ ಎಂದು ಅಪ್ಪ ಸುಮ್ಮನಾದರು. ಆದರೆ ನಮಗೆಲ್ಲ ಸುಮ್ಮನೆ ನಿಲ್ಲಲು ಅದಕ್ಕೆ ಸ್ಥಳ ಕೊಡುವ ಮನಸ್ಸಿರಲಿಲ್ಲ. ಅದನ್ನು ಮಾರಿ ಹೊಸ ಕಾರು ತೆಗೆದುಕೊಳ್ಳುವ ಆಲೋಚನೆ ಮಾಡಿದೆವು. ನಮ್ಮ ತಂದೆಯವರನ್ನು ಕೇಳದೆ ತಕ್ಷಣ ಕಾರ್ಯಪ್ರವೃತ್ತರಾದೆವು. ನಮ್ಮ ನಮ್ಮ ವಾಟ್ಸ್‌ಆ್ಯಪ್ ಬಳಗಕ್ಕೆಲ್ಲ ಕಾರು ಮಾರುವ ಮೆಸೇಜ್ ರವಾನಿಸಿದ್ದಾಯಿತು. ನಮ್ಮ ಕಾರಿನ ನಿಜ ಸ್ವರೂಪದ ಬಗ್ಗೆ ಅರಿವಿದ್ದ ಸಮೀಪದ ಗೆಳೆಯರು–ಬಂಧುಗಳು ತಮ್ಮ ಸಮೀಪದವರಿಗೆ ಅದರ ಸಂದ ವಯಸ್ಸಿನ ಬಗ್ಗೆ ಹೇಳಿ ಮಾತು ಅಲ್ಲಿಗೆ ಮುಗಿಸಿದರು.

ಸೆಕೆಂಡ್ ಹ್ಯಾಂಡ್ ಕಾರು ಕೊಳ್ಳುವ ಆಸಕ್ತಿ ಇರುವ ನಾಲ್ವರು ನಮ್ಮ ಕಾರು ಖರೀದಿಸಲು ಆಸಕ್ತಿ ವಹಿಸಿ, ನೋಡಲು ಬರುವುದಾಗಿ ತಿಳಿಸಿದರು. ಮರುದಿನ ಬೆಳಿಗ್ಗೆ ಶ್ವೇತ ವಸ್ತ್ರಧಾರಿ ರಾಜಕಾರಣಿಗಳಂತೆ ಕಾಣುವ ನಾಲ್ವರು ಮಧ್ಯ ವಯಸ್ಸಿನವರು ಬಂದರು. ನನ್ನ ತಮ್ಮ